

# ಅಮರ ಮಧುರ ಅಟೆನ್‌ಬರೊ



ಮಹಾಭಾರತ, ರಾಮಾಯಣ ಮಹಾಕಾವ್ಯಗಳನ್ನು ಸಿನಿಮಾಗಳನ್ನಾಗಿಸಿದ ಭಾರತೀಯ ಚಿತ್ರರಂಗಕ್ಕೆ ಒಂದು ಒಗಟಿನಂತೆ ಉಳಿದವರು ಗಾಂಧಿ. ಈ ಒಗಟನ್ನು ಬೆಳ್ಳಿತೆರೆಗೆ ಹೊಂದಿಸಿದವರು ಅಟೆನ್‌ಬರೊ ಅಗ್ಗಳಿಕೆ.

★ ಮಹತಿ

ಪ್ರತಿ ಯುಗಾದಿ ಹಬ್ಬದಲ್ಲೂ ದ.ರಾ. ಬೇಂದ್ರೆಯವರ ‘ಯುಗ ಯುಗಾದಿ ಕಳೆದರೂ’ ಗೀತೆ ಬಾನುಲಿ – ವಾಹಿನಿಗಳಲ್ಲಿ ಅನುರಣಿಸುವಂತೆ, ಅಕ್ಟೋಬರ್ 2ರ ‘ಗಾಂಧಿ ಜಯಂತಿ’ಯಂದು ಮರುಕಳಿಸುವ ಕಲಾಕೃತಿ ರಿಚರ್ಡ್ ಅಟೆನ್‌ಬರೊ ಅವರ ‘ಗಾಂಧಿ’.

ಗುಜರಾತಿನ ಗಾಂಧಿ ‘ಮಹಾತ್ಮ’ ಆಗುವ ರೂಪಾಂತರದಲ್ಲಿ ಹರಿಶ್ಚಂದ್ರ, ಶ್ರವಣಕುಮಾರ, ಕುದ್ಮಲ್ ರಂಗರಾವ್, ಅಂಬೇಡ್ಕರ್, ಬ್ರಿಟಿಷರು ಸೇರಿದಂತೆ ಹಲವರ ಪಾತ್ರಗಳಿವೆ. ಇದೇ ಗಾಂಧಿ, ಮಹಾತ್ಮರಾಗಿ, ಹುತಾತ್ಮರಾದ ನಂತರ ಅವರನ್ನು ಮತ್ತೆ ಜೀವಗೊಳಿಸಿದ ಅಗ್ಗಳಿಕೆ ಅಟೆನ್‌ಬರೊ ಅವರದ್ದು. ‘ಗಾಂಧಿತನ’ ರೂಪುಗೊಳ್ಳಲು ತಕ್ಕನಾದ ಸಂದರ್ಭವನ್ನು ಸೃಷ್ಟಿಸಿದ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸೇರಿದ ವ್ಯಕ್ತಿಯೇ, ‘ಗಾಂಧಿ’ಯನ್ನು ಸಿನಿಮಾ ಮೂಲಕ ಮರು ನಿರೂಪಿಸಿದ್ದು ಚರಿತ್ರೆಯ ವಿಸ್ಮಯಗಳಲ್ಲೊಂದು. ಮಹಾಭಾರತ, ರಾಮಾಯಣ ಮಹಾಕಾವ್ಯಗಳನ್ನು ಸಿನಿಮಾಗಳನ್ನಾಗಿಸಿದ ಭಾರತೀಯ ಚಿತ್ರರಂಗಕ್ಕೆ ಒಂದು ಒಗಟಿನಂತೆ ಉಳಿದವರು ಗಾಂಧಿ. ಈ ಒಗಟನ್ನು ಬೆಳ್ಳಿತೆರೆಗೆ ಹೊಂದಿಸಿದ್ದು ಅಟೆನ್‌ಬರೊ ಅಗ್ಗಳಿಕೆ.

ರಿಚರ್ಡ್ ಸ್ಯಾಮ್ಯುಯಲ್ ಅಟೆನ್‌ಬರೊ (29 ಆಗಸ್ಟ್ 1923 – 24 ಆಗಸ್ಟ್ 2014) ಜಾಗತಿಕ ಚಿತ್ರರಂಗ ಕಂಡ ಅದ್ಭುತ ಪ್ರತಿಭೆಗಳಲ್ಲೊಬ್ಬರು. ನಟರಾಗಿ, ನಿರ್ಮಾಪಕರಾಗಿ, ನಿರ್ದೇಶಕರಾಗಿ ಸಿನಿಮಾರಂಗವನ್ನು ಶ್ರೀಮಂತಗೊಳಿಸಿದ ಅವರ ಸೃಜನಶೀಲ ಸಿನಿಮಾ ಸಿದ್ಧಿಯ ಮೇರುರೂಪ– ‘ಗಾಂಧಿ’. ಈ ಸಿನಿಮಾದ ನಿರ್ಮಾಣ, ನಿರ್ದೇಶನ ಹಾಗೂ ಗಾಂಧಿ ಪಾತ್ರದಲ್ಲಿನ ಬೆನ್ ಕಿಂಗ್‌ಸ್ಲೇ ನಟನೆ ಸೇರಿದಂತೆ ಒಟ್ಟು ಎಂಟು ವಿಭಾಗಗಳಲ್ಲಿ ಆಸ್ಕರ್ ಪ್ರಶಸ್ತಿ ಪಡೆದುದು ‘ಗಾಂಧಿ’ ಚಿತ್ರದ ಅಗ್ಗಳಿಕೆ.

ಕೇಂಬ್ರಿಜ್‌ನಲ್ಲಿ ಜನಿಸಿದ ಅಟೆನ್‌ಬರೊ ಎರಡನೇ ಮಹಾಯುದ್ಧದ ಕಾಲದಲ್ಲಿ ‘ರಾಯಲ್ ಏರ್‌ಫೋರ್ಸ್’ನಲ್ಲಿ ಕೆಲಸ ಮಾಡಿದವರು. ಪೈಲಟ್ ತರಬೇತಿ ಪಡೆದ ನಂತರ ಅವರ ಗಮನ ಸಿನಿಮಾದತ್ತ ಹರಿಯಿತು. ಪೈನ್‌ವುಡ್ ಸ್ಟುಡಿಯೋದ ‘ಆರ್‌ಎಫ್ ಫಿಲ್ಮ್ ಯುನಿಟ್’ ಜೊತೆ ಗುರ್ತಿಸಿಕೊಂಡ ಅವರು, ಆರಂಭದಲ್ಲಿ ತೊಡಗಿಕೊಂಡಿದ್ದು ನಟನೆಯಲ್ಲಿ. ಸಿನಿಮಾಕ್ಕೆ ಮುನ್ನ ಕೂಡ ನಾಟಕಗಳಲ್ಲಿ ನಟರಾಗಿ ತೊಡಗಿಕೊಂಡಿದ್ದರು. 1942ರ ವೇಳೆಗಾಗಲೇ